DOC-47
T-P-2

R No KKNN 12

20-3-1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಪ್ರಕಾಶಕರು ಅರಮನೆ ಒರಸ್ವಾದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಸ್ವಾಜಾರನಿಂತ ಎಂ. ಎಸ್. ಶಿವ ... 3 ರೂ.

ಭೂ ಸೇನಾ ಕಾರ್ಪೊರೇಷನ್ ವಜಾ ಮಾಡಲು ಕರೆ

ಸರ್ಕಾರಕ್ಕೆ ಒತ್ತಾಯ

ಬೆಂಗಳೂರು — ಬೆಳೆ ವಿಮೆ ಜಾರಿಗೆ ತರಲು ಶಾಸನ ಸಭೆಯಲ್ಲಿ ಸರ್ಕಾರವನ್ನು ಒತ್ತಾಯ ಮಾಡಲಾಯಿತು.

★

ಇಲ್ಲೀ ವರೆಗೆ ಯಾರು ಪಡೆದಿಲ್ಲ

ಬೆಂಗಳೂರು — ಹರಿಜನ ಹುಡುಗಿಯಿರನ್ನು ವಿವಾಹ ಮಾಡಿಕೊಳ್ಳುವವರಿಗೆ ರೂ ೫ ಸಾವಿರ ಕೊಡಲಾಗುವುದೆಂದೂ, ಈ ವರೆಗೆ ಯಾರೂ ಈ ಹಣ ಪಡೆದಿಲ್ಲವೆಂದೂ ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

ಮುದ್ದಂರಿಗೆ ನೋಟೀಸು

ಬೆಂಗಳೂರು — ಪ್ರಧಾನ ಕಾರ್ಯದರ್ಶಿ ಶ್ರೀ ಜಿ. ವಿ. ಕೆ. ರಾಘವರವರು ಲೋಕಾಯುಕ್ತರ ಆದೇಶದಂತೆ ಇಲಾಖೆ ಅಧಿಕಾರಿಗಳ ಕಾರ್ಯದರ್ಶಿ ಹಾಗೂ ಇಂಜಿನಿಯರ್ ಇನ್ ಚೀಫ್ ಆದ ಶ್ರೀ ಐ ಎಂ ಮುದ್ದಂರಿಗೆ ಅವರ ವೇತನ ನಿರ್ಧಾರ ಇಂಜಿನೀರಿಂಗ್ ಕಂಪೆನಿ ವಿಚಾರದಲ್ಲಿ ಅಪಾದನೆ ತಿಳಿಸಿ ನೋಟೀಸು ಕೊಟ್ಟಿರುವರು. ಇವರಿಗೆ ಲಿಖಿತ ಮೂಲಕ ವಿವರ ಕೊಡಲು ಹದಿನೈದು ದಿನಗಳ ಕಾಲಾವಕಾಶ ಕೊಡಲಾಗಿದೆ. ಈ ರೀತಿ ಲೋಕೋಪಯೋಗಿ ಇಲಾಖೆ ಡೆಪ್ಯೂಟಿ ಸೆಕ್ರೆಟರಿ ಶ್ರೀ ಬಿ ಎನ್ ಜನಾರ್ಧನರಿಗೂ ನೋಟೀಸು ಕೊಡಲಾಗಿದೆ

●

ಪಜಕ್ಕೆ ಕರೆ

ಬೆಂಗಳೂರು — ಭೂ ಸೇನಾ ಕಾರ್ಪೊರೇಷನ್ ವಜ ಮಾಡಬೇಕೆಂದು, ಅಪಾ ಸಾರ್ವಜನಿಕ ಹಣದ ದುಂದುಗಾರಿಕೆಯೆಂದೂ ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೊಬ್ಬರು ತಿಳಿಸಿದರು

★

ಚೀನಾದ ಅಣ್ವಸ್ತ್ರ ಪ್ರಾಬಲ್ಯ ಸೂಚನೆ

ಮೇರಿ ಎಲ್ಲ ಯುದ್ಧ ಅಪರಾಧಿಗಳು ಬಿಡುಗಡೆ ಆದರು ... 293 ನೇ ದಿನ

ಚಳುವಳಿ ವಿದರಿಕೆ

ಮಂಗಳೂರು — ಈ ತಿಂಗಳು ಕಡೆಯೊಳಗೆ ಹೋಟೆಲು ಕೆಲಸಗಾರರ ಪುನರ್ನಿರ್ಮಿತ ಕನಿಷ್ಠ ವೇತನ ಜಾರಿಗೆ ಬರದಿದ್ದರೆ ಅವರು ರಾಜ್ಯವ್ಯಾಪ್ತಿ ಚಳುವಳಿ ಹೂಡುವರೆಂದು ಈ ಸಂಬಂಧದ ಸಂಘಟಿತ ಅಧ್ಯಕ್ಷರು ಹೋಟೆಲು ಕೆಲಸಗಾರರ ಭಾರಿ ಸಭೆಯಲ್ಲಿ ತಿಳಿಸಿದರು. ಸೋಮವಾರ ಈ ವಿಚಾರದಲ್ಲಿ ಹೋಟೆಲು ಕೆಲಸಗಾರರ ಭಾರಿ ಮೆರವಣಿಗೆ ನಡೆಯಿತು

○

ಮೆನವಿಪತ್ರ ಅರ್ಪಣೆ

ತಿರುವನಂತಪುರಂ — ಕೇರಳದ ಕೆ ವಿರೋಧ ಪಕ್ಷದ ನಾಯಕರು ಶಾಸನ ಸಭೆಗೆ ಬಹಿಷ್ಕಾರಹಾಕಿ ಬುಧವಾರ ರಾಜ್ಯಪಾಲರನ್ನು ಭೇಟಿ ಮಾಡಿ, ಅಚ್ಯುತ ಮೆನನ್ ಮಂತ್ರಿಮಂಡಲವನ್ನು ವಜ ಮಾಡಲು ತಿಳಿಸಿ ಮನವಿಪತ್ರ ಅರ್ಪಿಸಿದರು.

○

7 ದಿನಗಳ ರಿಮಾಂಡ್

ಅಲಹಾಬಾದು — ಲಾಯರು ಉಮೇಶ ಪಿನೊಡನೆ ಭೇರ್ಪಿ ಆಗಿದ್ದ ರೈಫಲ್ ಸಹಿತ ಮಂಗಳವಾರ ಹೈಕೋರ್ಟಿಗೆ, ಪ್ರಧಾನಿ ಇಂದಿರಾರ ಕಾಕ್ಷ್ಯ ಆರಂಭದ ಮುಂಚೆ ಬಂದಿದ್ದ ಸ್ಥಳೀಯ ಶ್ರೀ ವಿಜಯ ದಿನ ಪತ್ರಿಕೆಯ ಸಂಪಾದಕ ಗೋವಿಂದಮಿಶ್ರರನ್ನು ಅಡಿಷನಲ್ ಜುಡಿಷಿಯಲ್ ಮ್ಯಾಜಿಸ್ಟ್ರೇಟರು 7 ದಿನಗಳ ವರೆಗೆ ಪೋಲೀಸು ರಿಮ್ಯಾಂಡು ಮಾಡಿದರು.

★

ಸರ್ಕಾರಿ ಯೋಜನೆಯಲ್ಲಿ

ನವ ದೆಹಲಿ — ನಿಯಂತ್ರಣ ಇಲ್ಲದ ಬಟ್ಟೆಗಳ ಉತ್ಪಾದನೆ ಮೇಲೆ ತೆರಿಗೆ ವಿಧಿಸಲು ಸರ್ಕಾರ ಫಿಟ್ಟ ಆಗಿ ಯೋಚಿಸುತ್ತಿರುವುದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಲೋಕಸಭೆಯಲ್ಲಿ ಬೆಂಬಲ

ನವ ದೆಹಲಿ — ಕ್ಷಿಪ್ರ ಚುನಾವಣೆಯ ಸುಧಾರಣೆ ಬಗ್ಗೂ ಚುನಾವಣೆ ಖರ್ಚು ಕಡಿಮೆ ಮಾಡುವ ಕೇಳಿಕೆ ಲೋಕಸಭೆಲಿ 2 ಕಡೆಗಳಿಂದಲೂ ಬೆಂಬಲ ಪಡೆಯಿತು.

★

ವಿಚಾರಣೆಗೆ ಒತ್ತಾಯ

ನವ ದೆಹಲಿ — ಮೈಸೂರು ಅರಮನೆಯಲ್ಲಿ 350 ಟನ್ ಅವಶೇಷ ಪ್ರಾಚೀನ ಕಲಾಕೃತಿಯನ್ನು ಮೆಲ್ಕೋರನ್ನಿನ ಒಬ್ಬ ನಿವಾಸಿಗೆ 2 ಲಕ್ಷ ಡಾಲರು ಅಲ್ಪ ಹಣಕ್ಕಾಗಿ ಮಾರಲಾಗಿರುವ ಕುರಿತು ತಕ್ಷಣ ವಿಚಾರಣೆ ನಡೆಸುವಂತೆ ಶ್ರೀ ವೀರೇಂದ್ರ ಪಾಟೀಲರು ತಿಳಿಸಿದರು

★

ಹಣದುಬ್ಬರ

ಲಂಡನ್ನಿನಲ್ಲಿ ಈಚೆಗೆ ಒಂದು ಸಾವಿರ ವರ್ಷದ ಹಳೆಯ ಪೆನ್ನಿ ನಾಣ್ಯವೊಂದನ್ನು ಹರಾಜು ಹಾಕಲಾಯಿತು ; ಅದು 9 ಲಕ್ಷ ಪೆನ್ನಿಗಳಿಗೆ (9000 ಪೌಂಡುಗಳು) ಮಾರಾಟವಾಯಿತು ; ಇದರ ಬಗ್ಗೆ ಬ್ರಿಟನ್ನಿನಲ್ಲಿ ಒಂದು ಜೋಕು ; ಕಳೆದ ಒಂದು ಸಾವಿರ ವರ್ಷದಲ್ಲಿ ಹಣದುಬ್ಬರದಿಂದಾಗಿ ಪೆನ್ನಿಯೊಂದರ ಮೌಲ್ಯವು ಹೆಚ್ಚು ಕಡಮೆ ಒಂದು ಮಿಲಿಯದಷ್ಟು ಕೆಳಗಿಳಿದಿದೆ !

●

ವಿವಾಹ ಮಹೋತ್ಸವ

ಸೌ || ಸುಷಂಪ (ಮೈಸೂರು ವೆಜ್ ಲ್ಯಾಂಡ್ಸ್ ಚಲಚಿತ್ರ ಮಂದಿರದ ಪ್ರೊಪ್ರೈಟರ್ ಶ್ರೀ ಬಿ ಎಂ ರಾಮಮೂರ್ತಿಯವರ ಪುತ್ರಿ) ಮತ್ತು ಚಿ || ಡಾ || ಎಂ. ಶ್ರೀನಿವಾಸಮೂರ್ತಿ (ತಮಿಳುನಾಡು ಧರ್ಮಪುರಿ ಜಿಲ್ಲಾ ಬೆಳಗಂಡಹಳ್ಳಿ ಶ್ರೀ ಎ. ಮಹೇಶ್ವರಪ್ಪನವರ ಪುತ್ರ) ಇವರ ವಿವಾಹಮಹೋತ್ಸವವು ಗುರುವಾರ ಬೆಂಗಳೂರಿನಲ್ಲಿ ವೈಭವವಾಗಿ ನೆರವೇರಿತು.

ಹಕ್ಕುಬಾಧ್ಯತೆ ಸೂಚನೆ

ಬೆಂಗಳೂರು — ಮಗ್ಗುಂ ಜಿಲ್ಲೆಯ ಬೀಜಾಪುರದಲ್ಲಿ ಶಾಸನಸಭೆಯು ಲೋಕೋಪಯೋಗಿ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರ ಮೇಲೆ ಹಕ್ಕು ಬಾಧ್ಯತಾ ಸೂಚನೆಯನ್ನು ವಿರೋಧ ಪಕ್ಷದ ನಾಯಕ ಶ್ರೀ ಹೆಚ್. ದೇವೇಗೌಡರು ಮತ್ತು ಕಮ್ಯೂನಿಸ್ಟ್ ಪಕ್ಷದ ಸದಸ್ಯ ಶ್ರೀ ಎಂ ಎಸ್ ಕೃಷ್ಣನ್ ತಂದಿರುವರು.

●

ನಿಷೇಧಕ್ಕೆ ಕರೆ

ನವ ದೆಹಲಿ — ಆರ್ ಎಸ್ ಎಸ್, ಅನಂದ ಮಾರ್ಗ ವಿದ್ಯಾರ್ಥಿ ಪರಿಷತ್ ಇವು ಕೋಮುವಾರಿ ಮತ್ತು ಫ್ಯಾಸಿಸ್ಟ್ ಸಂಸ್ಥೆಗಳೆಂದು ಅವನ್ನು ನಿಷೇಧಿಸಬೇಕೆಂದು ಪ್ರಧಾನಿಯವರಿಗೆ 50 ಸಂಸತ್ ಸದಸ್ಯರ ಸಹಿಯ ಮನವಿಪತ್ರ ಕೊಡಲಾಯಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

○

ಅಭಾವ ಪರಿಹಾರ ವಿಧಿ

ಮದರಾಸು — ತಮಿಳುನಾಡು ಸರ್ಕಾರ ಅರ್ಥ ಇಲಾಖೆ ಹತೋಟಿಯಲ್ಲಿ ಅಭಾವ ಪರಿಹಾರ ನಿಧಿ ಸ್ಥಾಪಿಸಲು ನಿರ್ಧರಿಸಿ ವಿಧೇಯಕವನ್ನು ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯವರು ತಿಳಿಸಿದರು. ತಾವೂ ಹಾಗೂ ತಮ್ಮ ಮಂತ್ರಿ ಮಂಡಲದ ಇತರರೂ ತಮ್ಮ ! ತಿಂಗಳ ವೇತನವನ್ನು ನಿಧಿಗೆ ಕೊಡಲು ನಿರ್ಧರಿಸಿರುವುದಾಗಿಯೂ, ಅಂತೆಯೇ ತಮಿಳು ಎಂ ಪಿ ಗಳು, ಶಾಸಕರು ! ತಿಂಗಳ ಸಂಬಳ ಕೊಡುವಂತೆ ಮನವಿ ಮಾಡಿದರು. ಸರ್ಕಾರಿ ನೌಕರರು, ಕಾರ್ಖಾನೆ ಕೆಲಸಗಾರರು 1 ದಿನದ ಸಂಬಳ ಕೊಡುವಂತೆ ಮನವಿ ಮಾಡಿದರು.

●

ನಾಗ್ಪುರ — ಭೂದಾನ ಚಳುವಳಿ ಬೆಳ್ಳಿಹಬ್ಬ ಏಪ್ರಿಲ್ 18 ರಂದು ಪಡೆಯುತ್ತಿ

ಭೂಸುಧಾರಣಾ ಮೊಖದ್ದಮೆ

ಬೆಂಗಳೂರು— ಭೂಸುಧಾರಣಾ ಮೊಖದ್ದಮೆಗಳಲ್ಲಿ ಕೇಶವದಲ್ಲಿರುವಂತೆ ಭೂಮಾಲೀಕರೂ ಹಿಡುವಳಿದಾರರೂ ಜಂಟಿ ಅರ್ಜಿ ಹಾಕುವ ವಿಧಿ ಸೇರಿಸಬೇಕೆಂದು ಶಾಸನಸಭೆಯಲ್ಲಿ ಓರ್ವ ಸದಸ್ಯರು ಸಲಹೆ ಮಾಡಿದರು

○

15 ಅಂತಸ್ತುಗಳ ಮೇಲಿಂದ ಬಿದ್ದು ಸಾವು

ಬೊಂಬಾಯಿ— ಹಡವು ಸಂಸ್ಥೆಯ ಉಷ್ಣಕಾಟಿಬಂಧಿ ಶ್ರೀ ಕೆ. ಎಸ್. ಜಿ. ನಾಯರ್ ಹಡಗು ಭವಭದ 15 ನೇ ಅಂತಸ್ತಿನ ಮೇಲಿಂದ ಬಿದ್ದು ಮೃತಪಟ್ಟರು — ಈ ಬಗ್ಗೆ ಪೋಲೀಸು ತನಿಖೆ ನಡೆಸಲಾಗುತ್ತಿದೆ.

★

ವಿದ್ಯಾರ್ಥಿಗಳಿಗೆ ಸೂಚನೆ

ಪಾರಣಾಸಿ— ವಿದ್ಯಾರ್ಥಿಗಳು ಜನತಾ ಚಳವಳಿಯನ್ನು ಅರಿತುಕೊಂಡು, ಅದನ್ನು ಪ್ರತಿ ಹುನೆ ಮತ್ತು ಗ್ರಾಮಂಕ್ಕೂ ತೆರಳಲು ಸಿದ್ಧವಿರಬೇಕೆಂದು ಜಯಪ್ರಕಾಶ್ ನಾರಾಯಣರು ಉತ್ತರಪ್ರದೇಶ ವಿದ್ಯಾರ್ಥಿ ಸಂಘವನ್ನುದ್ದೇಶಿಸುತ್ತಾ ಹೇಳಿದರು.

★

ವಿದ್ಯಾರ್ಥಿ ಉರಕುಲಪತಿ

ಗೋರಖಪುರ– ಇಲ್ಲಿಯ ವಿಶ್ವವಿದ್ಯಾನಿಲಯದ ಉರಕುಲಪತಿಯರನ್ನು ಅವರ ಪೀಠದಿಂದ ವಿದ್ಯಾರ್ಥಿಗಳು ತೆಗೆದುಹಾಕಿ, ಆ ಸ್ಥಾನದಲ್ಲಿ ವಿದ್ಯಾರ್ಥಿ ನಾಯಕ ಗಂಗಾ ಸಿಂಗ್‌ರನ್ನು ಉರಕುಲಪತಿಯಾಗಿ ನೇಮಿಸಿದರು — ಈ ವಿದ್ಯಾರ್ಥಿ ಉಪಕುಲಪತಿಯರು ಮಾಡಿದ 10 ಆರ್ಡರ್‌ಗಳಲ್ಲಿ, ವಿಶ್ವವಿದ್ಯಾಲಯದ ಹೆಸರನ್ನು ಜಯಪ್ರಕಾಶನಾರಾಯಣ್ ವಿಶ್ವವಿದ್ಯಾಲಯ ಎಂದು ಬದಲಾಯಿಸುವುದೂ ಒಂದು.

ವುಡ್‌ಲಾಂಡ್ 21 3 75 ರಿಂದ

ಅಮೋಘ 4 ನೇ ವಾರ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ ದಿನಕ್ಕೆ ೪ ಪ್ರದರ್ಶನಗಳು

ಅಪೆರಾ 14 3 75 ರಿಂದ

ಪಣತೊಟ್ಟಂ

ಅಮೋಘ ತಮಿಳು ಚಿತ್ರ

ಹೊಸ ಕಾಪಿ ೨ನ ೩ ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Help The Gorakshana

— Humanitarian Propoganda Monthly ....

SHAKTI SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet Mysore 1

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore